ಮತ್ತು ಗಿರಿಜನ ವಿದ್ಯಾರ್ಥಿಗಳಿಂದ ಶಾಲಾ ಪ್ರವೇಶ ಶುಲ್ಕವನ್ನು ತೆಗೆದುಕೊಂಡಿಲ್ಲ. ಇದ್ದರಿಂದ ಸಂಬಂಧಪಟ್ಟ ವೈಸ್ ಚಾನ್ಸಲರ್‌ಗೆ ಸೂಚನೆ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

SRI G.B. SHANKAR RAO.—For anything and everything we cannot send for Vice Chancellor. I have already made it clear that I will collect information and try to know the correct position and supply the information. I have not shirked my responsibility. The hon. member should understand this.

MR. DEPUTY SPEAKER.—Get it as early as possible.

(Interruption)

SRI G. B. SHANKAR RAO.—I would assure the hon. members that legisimate interest? of the SC people will be safeguarded.

MR. DEPUTY SPEAKER.—Next item under rule 312.

(iii) *re : Offering of Prayers in Kannada by Christians in the Churches.*

† ಶ್ರೀ ಶೀರ್ನಾಳಿ ಚಂದ್ರಶೇಖರ್ (ಹೊಸನಗರ).—ಮಾನ್ಯ ಅಧ್ಯಕ್ಷರೇ ತಮ್ಮ ಅಪ್ಪಣೆ ಪಡೆದು ಬೆಂಗಳೂರು ನಗರದಲ್ಲಿ ಇಂದು ಕನ್ನಡ ಕ್ರೈಸ್ತರು ಪಡುತ್ತಿರುವ ಭವಣೆಯ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ಇಷ್ಟಪಡುತ್ತೇನೆ. ಮೊದಲು ಕ್ರೈಸ್ತರು ಲ್ಯಾಟೀನ್ ಭಾಷೆಯಲ್ಲಿ ತಮ್ಮ ಪೂಜಾ ವಿಧಾನಗಳನ್ನು ನಡೆಸುತ್ತಿದ್ದರು. ಆದರೆ ನಮ್ಮ ಕರ್ನಾಟಕ ರಾಜ್ಯದಲ್ಲಿ ರಾಜ್ಯದ ಆಡಳಿತ ಭಾಷೆ ಕನ್ನಡ ಎಂದು ಆದಮೇಲೆ ಎಲ್ಲಾ ಕನ್ನಡ ಕ್ರೈಸ್ತರೂ ತಮ್ಮ ದೇವಾಲಯಗಳಲ್ಲಿ ಪೂಜಾವಿಧಾನಗಳನ್ನು ಕನ್ನಡದಲ್ಲಿಯೇ ನಡೆಸಬೇಕೆಂದು ಆದೇಶವಿತ್ತರು. ಈ ಆದೇಶದಮೇಲೆ ಎಲ್ಲಾ ಕ್ರೈಸ್ತ ದೇವಾಲಯಗಳಲ್ಲಿ ಪೂಜಾವಿಧಾನಗಳು ಕನ್ನಡದಲ್ಲಿ ನಡೆಯಲು ಸಹಕರಿಸಿದ ಆಂದಿನ ಗುರುಗಳಾದಂತಹ ಶ್ರೀಮಾನ್ ಗೋತಾಕ್ ಮರಿಯವರು ಸಲೀಸಾಗಿ ನಡೆಸಿಕೊಂಡು ಬರುತ್ತಿದ್ದರು. ಆದರೆ ಈಗಿನ ನೂತನ ಸ್ವಾಮಿಗಳು ಗುರುಗಳಾಗಿ ಬಂದಮೇಲೆ ಕ್ರೈಸ್ತ ದೇವಾಲಯಗಳಲ್ಲಿ ಕನ್ನಡದಲ್ಲಿ ಪೂಜಾವಿಧಾನಗಳು ನಡೆಯುವ ಬಗ್ಗೆ ಸಮಸ್ಯೆ ಬಂತು. ಇಂದಿನ ಗುರುಗಳಾದಂತಹ ಶ್ರೀಮಾನ್ ಆರೋಕ್ಯಸ್ವಾಮಿಯವರು ಕ್ರೈಸ್ತ ದೇವಾಲಯಗಳಲ್ಲಿ ಕನ್ನಡದಲ್ಲಿ ಪೂಜಾವಿಧಾನಗಳನ್ನು ನಡೆಸಲು ಅಪ್ಪಾಯ ತರತಕ್ಕಂತಹ ಪರಿಸ್ಥಿತಿಯನ್ನು ಉಂಟುಮಾಡಿದ್ದಾರೆ. ಆದ್ದರಿಂದ ನಾನು ಈ ಸಂದರ್ಭದಲ್ಲಿ ಕೇಳಬಯಸುವುದೇನೆಂದರೆ ನಮ್ಮ ಬೆಂಗಳೂರು ನಗರವನ್ನು ತಮಿಳು ನಾಡಿಗೆ ವಹಿಸಿಕೊಡಲು ತಯಾರಾಗಿದೆ ಎನು ? ಎನ್ನುವ ಒಂದು ಪ್ರಶ್ನೆಯನು ಕೇಳಬೇಕಾಗಿದೆ. ನಮ್ಮ ರಾಜ್ಯದ ರಾಜ್ಯಧಾನಿಯಾದ ಬೆಂಗಳೂರು ನಗರದಲ್ಲಿರುವ ಕ್ರೈಸ್ತ ದೇವಾಲಯಗಳಲ್ಲಿ ಪೂಜಾ ವಿಧಾನಗಳನ್ನು ತಮಿಳಿನಲ್ಲಿ ನಡೆಸಲು ಸಾಧ್ಯವೇನು ? ಅದು ಎಂದೆಂದಿಗೂ ಸಾಧ್ಯವಿಲ್ಲದ ಮಾತು. ಕನ್ನಡ ನಾಡಿನಲ್ಲಿ ಕನ್ನಡಭಾಷೆಯನ್ನು ಕಲಿಯಬೇಕು ? ಕನ್ನಡ ಭಾಷೆಯನ್ನು ಕಲಿಯದಿದ್ದರೆ ಅದು ನಾಚಿಕೆಗೇಡು ಎನ್ನುವ ಒಂದು ಪ್ರಶ್ನೆ ಬರುತ್ತದೆ. ನಾವು ಮದ್ರಾಸ್‌ಗೆ ಹೋಗಿ ಕನ್ನಡ ಭಾಷೆಯನ್ನು ಕಲಿಯಬೇಕು ಎಂದು ಹೇಳುತ್ತಿಲ್ಲ.

ನಮ್ಮ ರಾಜ್ಯದ ರಾಜಧಾನಿಯಾದ ಬೆಂಗಳೂರು ನಗರದಲ್ಲಿ ಕ್ರಿಶ್ಚಿಯನ್ ದೇವಾಲಯಗಳಲ್ಲಿ ತಮಿಳಿನಲ್ಲಿಯೇ ಪೂಜೆ ಮಾಡಬೇಕೆಂಬವಾದ ಏನಿದೆ, ಇದನ್ನು ಕನ್ನಡಿಗರಾದ ನಾವುಗಳು ಸಹಿಸುವುದಕ್ಕೆ ಸಾಧ್ಯವಿಲ್ಲ. ಇದಕ್ಕೆ ಏನಾದರು ಮಾಡಿ ಒಂದು ಪೂರ್ಣ ವಿರಾಮ ಹಾಕಲೇ ಬೇಕಾಗುತ್ತದೆ. ನಮ್ಮ ಕನ್ನಡ ನಾಡಿನಲ್ಲಿಯೇ ಕನ್ನಡಕ್ಕೆ ಸ್ಥಾನ ಬೇಕು ಎಂದು ಕೇಳುವಂಥ ಪ್ರಸಂಗ ಬಂದಿರುವುದು ನಾಚಿಕೆಗೇಡಿನ ಪ್ರಸಂಗ ನಾವು ಏನು ಕೇರಳಾಕ್ಕೆ ಹೋಗಿ ಇಲ್ಲವೇ ತಮಿಳುನಾಡಿಗೆ ಹೋಗಿ ಕನ್ನಡದಲ್ಲಿ ಪೂಜೆ ಮಾಡುತ್ತೇವೆಂದು ಕೇಳುತ್ತಿಲ್ಲ. ನಮ್ಮ ನಾಡಿನಲ್ಲಿ ಅದರಲ್ಲಿಯೂ ನಮ್ಮ ರಾಜ್ಯದ ರಾಜಧಾನಿಯಲ್ಲಿರುವ ಚರ್ಚ್‌ಗಳಲ್ಲಿ ಕನ್ನಡದಲ್ಲಿ ಪೂಜೆ ಮಾಡುವುದಕ್ಕೆ ಅವಕಾಶ ಕೊಡಿ ಎಂದು ಕೇಳುತ್ತಿದ್ದೇವೆ. ಇದು ನಮ್ಮ ಅಜನ್ಮಸಿದ್ಧವಾದಂಥ ಈ ನಮ್ಮ ಹಕ್ಕನ್ನು ನಾವು ಪತ್ರಿಭಾದನೆ ಮಾಡುತ್ತಿದ್ದೇವೆ. ಈ ಒಂದು ಹಕ್ಕಿಗಾಗಿ ಕನ್ನಡದ ಕ್ರೈಸ್ತರು ಒಂದು ಸಮ್ಮೇಳನ ಸಹ ನಡೆಸಿದರು. ಆದರೆ ಅಂತಹವರ ಮೇಲೆ ದಬ್ಬಾಳಿಕೆ ನಡೆಯುತ್ತು. ಹಿಡಿದುಕೊಂಡು

ಹೊಡೆದರು, ಅಷ್ಟೆಅಲ್ಲ, ಪೋಲೀಸಿನವರು ಹೊಡೆತ ತಿಂದವರ ಮೇಲೇ ಕೇಸ್ ಹಾಕಿದರು. ಇಂತಹ ಅನ್ಯಾಯ ಎಲ್ಲಿಯಾದರೂ ಉಂಟೇ ? ನಮ್ಮ ಮುಖ್ಯಮಂತ್ರಿಗಳು ಕರ್ನಾಟಕ ರಾಜ್ಯದ ಧೀಮಂತ ಮುಖ್ಯಮಂತ್ರಿಗಳು ಎಂದು ಅನಿಸಿಕೊಂಡಿದ್ದಾರೆ. ಆದ್ದರಿಂದ ಕನ್ನಡನಾಡಿನಲ್ಲಿ ಕನ್ನಡದ ಹಿತವನ್ನು ಎತ್ತಿ ಹಿಡಿಯುವಂತಹ ಕೆಲಸವನ್ನು ಇವರು ಮಾಡಬೇಕು. ಹಾಗಿದ್ದರೆ ತಮಿಳುನಾಡಿನಲ್ಲಿ ಕನ್ನಡಲ್ಲಿ ಪೂಜೆ ಮಾಡಲು ಅವಕಾಶ ವಿದೆಯೇ ಎಂದು ನಾನು ಕೇಳುತ್ತೇನೆ? ಆದರೆ ನಮ್ಮ ರಾಜ್ಯದಲ್ಲಿ ಏತಕ್ಕೆ ಈ ಧೋರಣೆ ಎಂದು ಕೇಳುತ್ತೇನೆ? ಇದರಲ್ಲಿ ಏನೋ ಒಂದು ಕುಹಕ ನೀತಿ ಇರಬೇಕೆಂದು ನಾನು ನನಗೆ ಕಾಣುತ್ತಿದೆ. ಇದನ್ನು ನೋಡಿದರೆ ಇಡೀ ಬೆಂಗಳೂರು ನಗರವನ್ನು ಮತ್ತು ಕೋಲಾರದ ಕೆಲವು ಭಾಗಗಳನ್ನು ಕಬಳಿಸುವಂತಹ ಒಂದು ಪ್ರಯತ್ನವನ್ನು ಆ ರಾಜ್ಯ ಮಾಡುತ್ತಿದೆ ಎಂದು ಸಂಶಯ ಪಡಬೇಕಾಗುತ್ತದೆ. ಇದನ್ನೆಲ್ಲಾ ನೋಡಿದರೆ ಬೆಂಗಳೂರು ನಗರ ಕನ್ನಡದ ರಾಜಧಾನಿ ಎಂದು ಹೇಳಿಕೊಳ್ಳುವುದಕ್ಕೇ ನಾಚಿಕೆಯಾಗುತ್ತದೆ. ಇಂತಹ ಒಂದು ದಾರುಣ ಪರಿಸ್ಥಿತಿಯನ್ನು ನಾನು ಎಲ್ಲಿಯೂ ನೋಡುತ್ತಿಲ್ಲ. ಆದ್ದರಿಂದ ನಾನು ಸರ್ಕಾರದಲ್ಲಿ ಒತ್ತಾಯ ಮಾಡಿ ಕೇಳುವುದೇನೆಂದರೆ. ಈ ಬಗ್ಗೆ ಕೂಡಲೇ ವ್ಯಾಟಿಕನ್ ಅಥಾರಿಟಿಗೆ ಒಂದು ಪತ್ರ ಬರೆದು ಕನ್ನಡ ನಾಡಿನಲ್ಲಿ ಯಾವ ಭಾಷೆಯಲ್ಲಿ ಪೂಜಾ ವಿಧಿಗಳನ್ನು ನಡೆಸಲು ತಾವು ಆದೇಶ ಕೊಟ್ಟಿದ್ದೀರಿ ಎಂಬ ಬಗ್ಗೆ ಅವರಿಂದ ತಿಳಿದುಕೊಳ್ಳಬೇಕು ಇದರ ಜೊತೆಗೆ ಸಮಯ ಬಂದರೆ ನಾವುಗಳು ರೋಂ ನಗರದವರಿಗೆ ನಿಯೋಗ ಹೋಗುವುದಕ್ಕೂ ಸಹ ನಾವು ತಯಾರಿದ್ದೇವೆ ಏಕೆಂದರೆ ಕನ್ನಡನಾಡಿನಲ್ಲಿ ಹುಟ್ಟಿಬೆಳೆದವರು ಇಂಥಾದ್ದನ್ನೆಲ್ಲಾ ಸಹಿಸುವುದಕ್ಕೆ ತಯಾರಿಲ್ಲ. ಇವೊತ್ತಿನದಿವಸ ಅಲ್ಲಿರುವಂತಹ ಸ್ವಾಮಿಗಳ ಮೇಲೆ ಕೆಲವು ವಿರೋಧ ಶಕ್ತಿಗಳು ಬೆಳೆಯುತ್ತಿವೆ. ಅಲ್ಲಿ ಈಗ ಆರೋಕ್ಯ ಸ್ವಾಮಿಗಳು ಎಂದು ಏನಿದ್ದಾರೆ, ಅವರನ್ನು ಇಲ್ಲಿಂದ ಕಿತ್ತು ಹಾಕಬೇಕೆಂಬ ದೃಷ್ಟಿಯಲ್ಲಿ ರಾಜಕೀಯದ ಕುಹಕತನ ನಡೆಯುತ್ತಿದೆ. ಆದಕ್ಕಾಗಿಯೇ ಕೆಲವರು ನನ್ನ ವಿರುದ್ಧ ಕನ್ನಡದ ಮುಖವಾಡ ಧರಿಸಿಕೊಂಡು ಹೋರಾಟ ಮಾಡುತ್ತಿದ್ದಾರೆಂದು ಆ ಸ್ವಾಮಿಗಳು ಆಪಾದನೆ ಕೂಡ ಮಾಡುತ್ತಿದ್ದಾರೆ. ನನಗೇನೂ ಆ ಸ್ವಾಮಿಗಳ ಮೇಲೆ ವೈಯಕ್ತಿಕವಾದಂಥ ದ್ವೇಷ ಇಲ್ಲ. ಆದರೆ ಕನ್ನಡದಲ್ಲಿ ಯಾರಾದರು ಪೂಜಾವಿಧಿಗಳನ್ನು ನಡೆಸಬೇಕೆಂದು ಹೋದಾಗ ಅದನ್ನು ಖಂಡ ತುಂಡವಾಗಿ ವಿರೋಧ ಮಾಡುವಂತಹ ಸ್ವಾಮಿಗಳ ಜೊತೆಯಲ್ಲಿ ಯಾವ ರೀತಿ ಮಾತನಾಡಬೇಕೆಂಬುದು ನನಗೆ ತಿಳಿಯುತ್ತಿಲ್ಲ. ಇವೊತ್ತಿನದಿವಸ.. ...

SRI K. BHASKAR NAIDU — The affection towards the language is really appreciated. But, I would also want to join Sri Sheernaly Chandrashekhar in telling why slokas are only in Sanskrit. I want these poojas also must be performed in Kannada.

ಶ್ರೀ ಎಸ್.ಎಂ. ಶ್ರೀನ್ಯಾಳಿ ಚಂದ್ರಶೇಖರ್.—ಆದನ್ನು ನಾನು ಸ್ವಾಗತ ಮಾಡುತ್ತೇನೆ. ಒನೇ ಶತಮಾನದಲ್ಲಿಯೇ ಭಕ್ತಿಭಂಡಾರಿ ಬಸವಣ್ಣನವರು ಈ ರಾಜ್ಯದಲ್ಲಿದ್ದ ಉಪನಿಷತ್ತುಗಳನ್ನು ಮತ್ತು ವೇದಗಳನ್ನು ಕನ್ನಡಕ್ಕೆ ಭಾಷಾಂತರ ಮಾಡಿದ್ದೇ ಅಲ್ಲದೆ. ವಿಧಿನಿಯಮಗಳನ್ನು ಯಾವ ರೀತಿ ಆನುಸರಿಸಬೇಕೆಂಬ ಬಗ್ಗೆ ಅವರು ನಮಗೆ ದಾರಿ ತೋರಿಸಿದ್ದಾರೆ. ಅವರು ನಮ್ಮ ಕುಲಕ್ಕೆ ಸೇರಿದವರಾಗಿದ್ದರು. ಅಂದರೆ ಅವರು ಶೈವ ಬ್ರಾಹ್ಮಣರಾಗಿದ್ದರು. ಅಂತಹವರು ನಮಗೆ ನಮ್ಮ ನಮ್ಮ ಆಡುಭಾಷೆಯಲ್ಲಿಯೇ ಪೂಜೆ ಮಾಡಬಹುದೆಂದು ಹೇಳಿದ್ದರು. ಈ ವಿಚಾರದಲ್ಲಿ ನಾವೇನೂ ಹಿಂದೆ ಬಿದ್ದಿಲ್ಲ. ನಮ್ಮ ಕರ್ನಾಟಕ ರಾಜ್ಯ ಬೇರೆಯವರಿಗೆ ಮಾರ್ಗದರ್ಶನ ಮಾಡಿ ತೋರಿಸಿದೆ. ಕ್ರೈಸ್ತರಿಂದಲೂ ಸಹ ನಾವು ಕನ್ನಡಕ್ಕಾಗಿ ಬಹಳಷ್ಟು ನಿರೀಕ್ಷೆ ಮಾಡಿದ್ದೇವೆ. ಕಿಟಲ್ ದಿಕ್ಷನರಿಯಿಂದ ಹಿಡಿದು ಜೆನ್ನಪ್ಪ ಉತ್ತಂಗಿ ಅವರು ಸರ್ವಜ್ಞ ವಚನಗಳನ್ನು ಭಾಷಾಂತರ ಮಾಡುವರೆಗೂ ಹಾಗೂ ಪ್ರತಿಯೊಂದು ಹಂತದಲ್ಲಿಯೂ ಕ್ರೈಸ್ತ ಪಾದ್ರಿಗಳು ಕನ್ನಡಕ್ಕಾಗಿ ತಮ್ಮ ಒಂದು ಸೇವೆಯನ್ನು ಸಲ್ಲಿಸಿದ್ದಾರೆ. ಕ್ರೈಸ್ತ ಪಾದ್ರಿಗಳು ಕನ್ನಡಕ್ಕಾಗಿ ಕೊಟ್ಟಂತಹ ಕೊಡುಗೆ ಅಷ್ಟಿಷ್ಟಲ್ಲ. ಆದರೂ ಸಹ ಕನ್ನಡದಲ್ಲಿ ಪೂಜೆಮಾಡುವ ವಿಚಾರದಲ್ಲಿ ಒಂದು ರೀತಿಯ ಮಲತಾಯಿ ಧೋರಣೆ ಬಂದಿದೆ ಎಂದರೆ ಇದರಲ್ಲಿ ಏನೋ ಕಾರಸ್ಥಾನ ಇದೆ ಎಂದು ನಾನು ತಿಳಿಯುತ್ತೇನೆ ಆದ್ದರಿಂದ ಸರ್ಕಾರದವರು ಇದನ್ನು ಲಘುವಾಗಿ ಪರಿಗಣಿಸಬಾರದು. ಏಕೆಂದರೆ, ಹಂತ ಹಂತವಾಗಿ ತಮಿಳಿನ ಆಕ್ರಮಣ ನಡೆಯುತ್ತಿದೆ. ನಾಳೆ ಒಂದು ದಿವಸ ಬೆಂಗಳೂರು ನಗರವನ್ನು ತಮಿಳುನಾಡಿಗೆ ಸೇರಿಸಬೇಕೆಂಬ ನೀತಿ ಬಂದರೂ ಬರಬಹುದು. ಆದ್ದರಿಂದ ಮೊಳಕೆಯಲ್ಲಿಯೇ ಇದನ್ನು ಜಿಗುಟಿ ಪಾಕ ಬೇಕು. ಇಲ್ಲದಿದ್ದರೆ ಮುಂದೆ ಕಷ್ಟವಾಗುತ್ತದೆ. ಕರ್ನಾಟಕ ರಾಜ್ಯದಲ್ಲಿ ಯಾವ ಭಾಷೆಯಲ್ಲಿ ಪೂಜೆ ನಡೆಸಬೇಕೆನ್ನುವ ವಿಚಾರದಲ್ಲಿ ಮೊದಲು ವ್ಯಾಟಿಕನ್ ಅಥಾರಿಟಿ ಅವರಿಗೆ ಪತ್ರ ಬರೆದು ತಿಳಿದುಕೊಳ್ಳ

ಅವರೇನಾದರೂ ತಮಿಳುಭಾಷೆಯಲ್ಲಿ ಪೂಜೆ ನಡೆಸಲು ಆದೇಶ ಕೊಟ್ಟಿದ್ದೇವೆಂದು ಬರೆದು ತಿಳಿಸಿದರೆ ಅದಕ್ಕೆ ನಾವೇನೂ ಅಡ್ಡಿ ಬರುವುದಿಲ್ಲ. ಆದರೆ ಅವರು ಏನಾದರೂ ಕನ್ನಡದಲ್ಲಿ ಪೂಜೆನಡೆಸಲು ಆದೇಶ ಕೊಟ್ಟಿದ್ದೇವೆಂದು ಬರೆಯೊ ತಿಳಿಸಿದರೆ ಆಗ ತಾವು ಕನ್ನಡವನ್ನು ಕಡ್ಡಾಯ ಮಾಡಲೇ ಬೇಕು. ಕನ್ನಡ ಕ್ರೈಸ್ತರು ಈಗಾಗಲೇ ಈ ಬಗ್ಗೆ ಸರ್ಕಾರಕ್ಕೆ ಮನವಿ ಕೊಟ್ಟಿದ್ದಾರೆ. ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ ಹೇಳಿದ್ದಾರೆ. ಇಷ್ಟಾದರೂ ಕನ್ನಡಕ್ಕೆ ಪ್ರಾಧಾನ್ಯತೆ ಸಿಗದಿದ್ದರೆ ನಾವು ವ್ಯಾಟಿಕನ್‌ವರಿಗೆ ನಿಯೋಗ ಹೋಗಲು ತಯಾರಿದ್ದೇವೆ. ಏಕೆಂದರೆ, ಕನ್ನಡಿಗರ ಮೇಲೆ ಆಗುತ್ತಿರುವ ಅನ್ಯಾಯವನ್ನು ಸಹಿಸುವುದಕ್ಕೆ ಸಾಧ್ಯವಿಲ್ಲವೆಂದು ನಾನು ಸರ್ಕಾರಕ್ಕೆ ಎಚ್ಚರಿಕೆಯಿಂದ ಹೇಳುತ್ತಿದ್ದೇನೆ. ಆದ್ದರಿಂದ ಮಾನ್ಯ ಆರ್ಥಿಕ ಮಂತ್ರಿಗಳು ಈ ಬಗ್ಗೆ ಸೂಕ್ತ ರೀತಿಯ ಭರವಸೆ ಕೊಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

† ಶ್ರೀ ಮೈಕೇಲ್ ಫರ್ನಾಂಡೀಸ್ (ಭಾರತೀನಗರ).—ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಉತ್ತರ ಕೊಡುವುದಕ್ಕೆ ಮೊದಲು ನಾನು ಒಂದೆರಡು ವಿಚಾರಗಳನ್ನು ಹೇಳಬೇಕಾಗಿದೆ. ನನ್ನ ಮಾತೃ ಭಾಷೆ ಕೊಂಕಣಿಯಾದರೂ ಸಹ ನನ್ನ ಮೊದಲ ವಿದ್ಯಾಭ್ಯಾಸ ಆಗಿದ್ದು ಕನ್ನಡದಲ್ಲಿ. ಅನಂತರ ಇಂಗ್ಲೀಷ್‌ನಲ್ಲಿ ವಿದ್ಯಾಭ್ಯಾಸ ಆಯಿತು. ಈಗ ಬಳಕೆ ಭಾಷೆಯಾದಂಥ ಇಂಗ್ಲಿಷ್‌ನಲ್ಲಿ ನನಗೆ ಪ್ರೊಫಿಷಿಯೆನ್ಸಿ ಇದೆ. ನನಗೆ ಕನ್ನಡ ಭಾಷೆಯ ಜೊತೆಗೆ ತುಳು ಭಾಷೆಯೂ ಸಹ ಬರುತ್ತದೆ. ತುಳು ಭಾಷೆಯಲ್ಲಿ ಸಾರ್ವಜನಿಕ ಭಾಷಣ ಕೂಡ ಮಾಡಿದ್ದೇನೆ. ತಮಿಳು ಭಾಷೆ ನನಗೆ ಸ್ವಲ್ಪ ಸ್ವಲ್ಪ ಬರುತ್ತದೆಯೇ ಹೊರತು ಆ ಭಾಷೆಯಲ್ಲಿ ಸಾರ್ವಜನಿಕವಾಗಿ ಭಾಷಣ ಮಾಡಲು ನನಗೆ ಬರುವುದಿಲ್ಲ. ಇಷ್ಟೆಲ್ಲಾ ಭಾಷೆಗಳ್ಳನ್ನು ಗೊತ್ತಿರುವ ನನಗೆ ಕನ್ನಡ ಭಾಷೆಯ ಬಗ್ಗೆ ಅಭಿಮಾನ ಇಲ್ಲ ಎಂದು ಯಾರೂ ಸಹ ತಿಳಿದುಕೊಳ್ಳಬಾರದು.

ಇನ್ನು ಶ್ರೀ ಶೀರ್ನಾಳಿ ಚಂದ್ರಶೇಖರ್ ಅವರು ಏನು ಹೇಳಿದರು. ಅದರಲ್ಲಿ ಕೆಲವು ಸತ್ಯಕ್ಕೆ ದೂರವಾದ ವಿಚಾರಗಳಿವೆ. ಮೊದಲನೆಯದಾಗಿ ವ್ಯಾಟಿಕನ್‌ನಲ್ಲಿ ಆಯಾ ರಾಜ್ಯ ಭಾಷೆಗಳಲ್ಲಿಯೇ ಪೂಜೆಗಳಾಗಬೇಕೆಂದು ತೀರ್ಮಾನವೇನೂ ಆಗಿಲ್ಲ. ಈ ಮೊದಲು ಹಿಂದೂ ಧರ್ಮದಲ್ಲಿ ಯಾವ ರೀತಿ ಸಂಸ್ಕೃತ ಭಾಷೆಯಲ್ಲಿಯೇ ಪೂಜೆಗಳಾಗುತ್ತಿತ್ತೋ ಆದೇ ರೀತಿ ಇಡೀ ಪ್ರಪಂಚದಲ್ಲಿ ಲ್ಯಾಟಿನ್ ಭಾಷೆಯಲ್ಲಿಯೇ ಚರ್ಚ್‌ಗಳಲ್ಲಿ ಪೂಜೆಗಳಾಗುತ್ತಿದ್ದವು ಅನಂತರ ೧೯೬೨ರಲ್ಲಿ ಇದನ್ನು ಬದಲಾಯಿಸಿ ವರ್ನಾಕ್ಯುಲರ್ ಭಾಷೆಯಲ್ಲಿ ಪೂಜೆಯಾಗಬೇಕೆಂದು ವ್ಯಾಟಿಕನ್ ಕೌನ್ಸಿಲ್‌ನಲ್ಲಿ ತೀರ್ಮಾನ ಮಾಡಿದರು. ಇದರ ಒಂದು ಡೆಫಿನಿಷನ್‌ನಲ್ಲಿ ಅವರವರಿಗೆ ಸಂಬಂಧಪಟ್ಟ ರಾಜ್ಯಭಾಷೆಗಳು ಸೇರುತ್ತವೆ, ಸ್ವಂತ ಮಾತೃ ಭಾಷೆಗಳು ಸೇರುತ್ತವೆ, ಅವರವರ ಊರುಗಳ ಭಾಷೆಗಳು ಸೇರುತ್ತವೆ. ಅವರಲ್ಲಿ ಬಳಕೆಯಲ್ಲಿರುವ ಭಾಷೆಗಳು ಸೇರುತ್ತವೆ. ಒಂದು ಕಾಲದಲ್ಲಿ ಇಂಗ್ಲೀಷ್‌ನವರು ಈ ದೇಶವನ್ನು ಆಳುತ್ತಿದ್ದ ಕಾಲದಲ್ಲಿ Englishman vernacular would be also English. Even for conquering the people, if they come and live in the conquered nation, the vernacular for them is English. ಒಟ್ಟಿನಲ್ಲಿ Dictionary definition ನಲ್ಲಿ ಈ ವರ್ನಾಕ್ಯುಲರ್ ಪದವನ್ನು ಬಹಳ ವಿಸ್ತಾರವಾಗಿ ಅನುವಾದ ಮಾಡಿದ್ದಾರೆ. ಇಷ್ಟು ಹೇಳಿದ ಮೇಲೆ ನಮ್ಮಲ್ಲಿಯೂ ಸಹ ಅವರವರ ಭಾಷೆಗಳಲ್ಲಿಯೇ ಪೂಜೆಯಾಗಬೇಕೆಂದು ತೀರ್ಮಾನವಾಯಿತು. ಈಗ ಉದಾಹರಣೆಗೆ ಹೇಳುವುದಾದರೆ, ಮಂಗಳೂರಿನಲ್ಲಿ ಕೊಂಕಣಿಯಲ್ಲಿಯೇ ಪೂಜೆಯಾಗುತ್ತದೆ. ಅದರಂತೆ ವಿರಾಜಪೇಟೆಯಲ್ಲಿ ಕೊಂಕಣಿ ಭಾಷೆಯನ್ನು ಪಾತನಾಡತಕ್ಕಂಥ ಒಂದು ಪಾರ್ಕೇಟ್ ಇದೆ. ಆದ್ದರಿಂದ ಅಲ್ಲಿಯೂ ಸಹ ಅದೇ ಭಾಷೆಯಲ್ಲಿ ಪೂಜೆ ಮಾಡುತ್ತಾರೆ. ಕಾರವಾರ ಮತ್ತು ಮುಂಬೈನಲ್ಲಿ ಕೊಂಕಣಿ ಮಾತನಾಡುವ ಜನರು ಅದೇ ಭಾಷೆಯಲ್ಲಿ ಪೂಜೆ ಮಾಡುತ್ತಾರೆ. ಹೀಗೆ ಅವರವರ ರಾಜ್ಯ ಭಾಷೆಯಲ್ಲಿ ಪೂಜೆ ಮಾಡಲು ಅವರ ವಿರೋಧವೇನೂ ಇಲ್ಲ. ಈಗ ಜನರು ಪೂಜೆ ಮಾಡಲು ದೇವರ ಹತ್ತಿರ ಹೋದಾಗ it is a language to communicate with god. ಆದ್ದರಿಂದ ಯಾವ ಭಾಷೆಯಲ್ಲಿ ಎಷ್ಟು ಸುಲಭವಾಗಿ ದೇವರನ್ನು ಪೂಜೆ ಮಾಡಬಹುದೋ ಅಂತಹ ಭಾಷೆಯಲ್ಲಿ ಮಾಡಬಹುದು. ಅದೇ ರೀತಿ ಕನ್ನಡ ನಾಡಿನಲ್ಲಿ ಕನ್ನಡದ ಜನರಿಗೆ ಕನ್ನಡದಲ್ಲಿಯೇ ಪೂಜೆ ಮಾಡುವ ಹಕ್ಕು ಏನಿದೆ. ಅದಕ್ಕಾಗಿ ಹೋರಾಟ ಮಾಡಲು ನಾನೂ ಸಹ ತಯಾರಿದ್ದೇನೆ. ಕನ್ನಡಿಗರಿಗೆ ಕನ್ನಡಲ್ಲಿಯೇ ಪೂಜೆ ಮಾಡುವುದಕ್ಕೆ ಅವಕಾಶ ವಿರಬೇಕೆಂದು ಹೇಳುತ್ತೇನೆ. ಆದರೆ ಇದರಲ್ಲಿ ಸ್ವಲ್ಪ ವ್ಯತ್ಯಾಸವಿದೆ. ಇದಕ್ಕೆ historical reasons ಇದೆ.

೧–೮೦ ಪಿ. ಎಂ.

ಬೆಂಗಳೂರಿನಲ್ಲಿ ಒಂದು ಚರಿತ್ರಾರ್ಹವಾದ ಕಾರಣಗಳಿಂದಾಗಿ ಸುಮಾರು ೧೦೦–೧೨೦ ವರ್ಷಗಳಿಂದಿರಬಹುದು ಕಂಟೋನ್‌ಮೆಂಟ್ ಏರಿಯಾದಲ್ಲಿ ಬ್ರಿಟೀಷರು ಇದ್ದಾಗ ಅವರ ಆಳ್ವಿಯಲ್ಲಿ ತಮಿಳರು ಬಟ್ಲರ್‌ಗಳಾಗಿ ವಾಷರ್‌ಮನ್‌ರಾಗಿ ಏನೋ ಒಂದು ಹುದ್ದೆಗಳಲ್ಲಿದ್ದುಕೊಂಡಿದ್ದರು ಹೀಗೆ ತಮಿಳರೇ ಹೆಚಾ ಗಿ ಇಂಥ ಕೆಲಸಗಳಲ್ಲಿ ಆ ಕಾಲದಿಂದಲೂ ಇದ್ದುಕೊಂಡು ಬಂದಿದ್ದರಿಂದ ತಮಿಳುಭಾಷೆಯಲ್ಲಿಯೇ ಪೂಜೆಗಳು ನಡೆದುಕೊಂಡು ಬರುತ್ತಿತ್ತು. ಆಗಿನಿಂದಲ್ಲೂ ತಾಮಸ್ ಪ್ರೋತಕಾಮ್ ಎಂಬುವರು ೨೮ ವರ್ಷಗಳಕಾಲ ಸುದೀರ್ಘವಾಗಿ ಒಂದು ಟರ್ಮ್ ಬಿಷಪ್ ಆಗಿದ್ದರು.

SRI K. BHASKAR NAIDU.—Now it is already 1 P M. how long we are going to sit ?.....

MR. DEPUTY SPEAKER —We will sit for another ten or fifteen minutes.

ಶ್ರೀ ಎಂ. ವಿ. ರಾಜಶೇಖರನ್.—ತಾವು ಹತ್ತು ನಿಮಿಷಕಾಲ ಕುಳಿತುಕೊಳ್ಳಬೇಕೆಂದು ಹೇಳುತ್ತಿದ್ದೀರಿ. ನಿನ್ನೆದಿವಸ ತಾವು ಕೆಲವೊಂದು ವಿಷಯಗಳನ್ನು ಎತ್ತಿದ್ದೆವು. ಅವುಗಳಲ್ಲಿ ಬಹಳ ಪ್ರಮುಖವಾದ ವಿಷಯವೆಂದರೆ ಬರಗಾಲಪೀಡಿತ ಪ್ರದೇಶದ ಒಂದು ಪರಿಸ್ಥಿತಿ ಏನು ಇದೆ ಅದನ್ನು ಚರ್ಚೆಮಾಡಬೇಕಾಗಿದೆ. ತಾವು ಹತ್ತು ನಿಮಿಷವೆಂದರೆ ಇನ್ನೂ ಅನೇಕ ವಿಚಾರಗಳು ಸದನದಮುಂದೆ ಇದೆ. ಅದನ್ನು ಯಾವಾಗ ಮುಗಿಸುತ್ತೀರಿ, ಬರಗಾಲಪೀಡಿತ ಪ್ರದೇಶಗಳ ಕಷ್ಟಕಾರ್ಪಣ್ಯಗಳ ವಿಷಯದ ಬಗ್ಗೆ ಯಾವಾಗ ಪ್ರಸ್ತಾಪ ಮಾಡುತ್ತೀರಿ ಆದನ್ನು ತಾವು ದಯವಿಟ್ಟು ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಭಾಸ್ಕರಶೆಟ್ಟಿ.—ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ನಾವು ಈವತ್ತಿನ ದಿವಸ ಎಲ್ಲ ಪ್ರಶ್ನೆಗಳನ್ನು ಮುಗಿಸಲೇಬೇಕೆಂದು ತೀರ್ಮಾನ ಮಾಡಿದ್ದೇವೆ. ಆದ್ದರಿಂದ ದಯವಿಟ್ಟು .....

ಶ್ರೀ ಪಿ. ರಾಮದೇವ್.—ಈವತ್ತಿನದಿವಸವೇ ಎಲ್ಲವನ್ನು ಮುಗಿಸೋಣ. ನಾಳೆಯದಿವಸಕ್ಕೆ ಹೋಗುವುದು ಬೇಡ. ಒಳ್ಳೆಯ ಮಹತ್ವದ ವಿಷಯಗಳು ಇರುವುದರಿಂದ ಈಗ ಅಡ್ಜರ್ನ್‌ಮಾಡಿ ಮತ್ತೆ ಮೂರು ಗಂಟೆಗೆ ಸೇರೋಣವೆಂದು ಹೇಳುತ್ತೇನೆ.

ಶ್ರೀ ಎಂ. ಚಂದ್ರಶೇಖರ್.—ಮಾನ್ಯ ಸಭಾಧ್ಯಕ್ಷರೇ ಎರಡು ಮುಖ್ಯವಾದ ವಿಷಯಗಳು ಇರುತ್ತವೆ. ಡೌಟ್ ಬಗ್ಗೆ ಮಾತನಾಡತಕ್ಕಂಥದ್ದು ಇರುತ್ತದೆ. ಆದ್ದರಿಂದ ಈವತ್ತೇ ಮುಗಿಸೋಣ. ಈಗ ಅಡ್ಜರ್ನ್‌ಮಾಡಿ ಮತ್ತೆ ಸೇರೋಣ.

ಶ್ರೀ ಎಂ. ವೀರಪ್ಪಮೊಯಿಲಿ.—ಮಾನ್ಯ ಅಧ್ಯಕ್ಷರೇ ಮಾನ್ಯ ಚೀಫ್ ವಿಪ್ ರವರು ಹೇಳಿದ ಪ್ರಕಾರ ಈವತ್ತು ಒಂದು ಗಂಟೆಗೆ ಮುಗಿಯಬೇಕಾಗಿತ್ತು. ಆದರೆ ಅನೇಕ ಕಾರಣಗಳಿಂದ, ಅನೇಕಜನ ಮಾನ್ಯ ಸದಸ್ಯರು ಜಾಗ್ರತರಾಗಿ ಅನೇಕ ಸಮಸ್ಯೆಗಳನ್ನು ಎತ್ತಿದ್ದಾರೆ. ಆದ್ದರಿಂದ ಸಮಯಕ್ಕೆ ಸರಿಯಾಗಿ ಕಾರ್ಯಕಲಾಪಗಳು ಮುಗಿಯಲಿಲ್ಲ. ಮಾನ್ಯ ರಾಜಶೇಖರನ್‌ರವರು ಹೇಳಿದಹಾಗೆ ಅನೇಕ ಪ್ರಮುಖವಾದಂಥ ವಿಚಾರಗಳು ಇದ್ದರೂ ಕೂಡ ಇವತ್ತು ಮಧ್ಯಾಹ್ನದಮೇಲೆ ಕ್ಯಾಬಿನೆಟ್ ಮೀಟಿಂಗ್ ಇರುವುದರಿಂದ ತಾವು ಮನಸ್ಸುಮಾಡಿದರೆ ಈವತ್ತು ಒಂದೂವರೆ ಗಂಟೆಗೆ ಮುಗಿಸಬಹುದು. ಬರಗಾಲದ ಬಗ್ಗೆ ಏನು ಕಾರ್ಯಕ್ರಮವನ್ನು ತೆಗೆದುಕೊಂಡಿದ್ದಾರೆ ಎಂಬುದರ ಬಗ್ಗೆ ಮಾನ್ಯ ರೆವಿನ್ಯೂಮಂತ್ರಿಗಳು ತಿಳಿಸುತ್ತಾರೆ. ಆಮೇಲೆ ಏನಾದರೂ ಸಲಹೆಗಳು ಇದ್ದರೆ ಮಾನ್ಯ ಸದಸ್ಯರು ಅದನ್ನು ಕೊಡಬಹುದು. ಆದ್ದರಿಂದ ಸಭೆಯನ್ನು ಮಧ್ಯಾಹ್ನದ ಮೇಲೆ ಮುಂದುವರಿಸತಕ್ಕಂಥದ್ದು ಸಾಧುವಾದುದಲ್ಲ. ಮಾನ್ಯ ವಿರೋಧಪಕ್ಷದ ಸದಸ್ಯರು ನಾವು ಎಲ್ಲ ಸೇರಿ ಯಾವ ತೀರ್ಮಾನವನ್ನು ತೆಗೆದುಕೊಂಡಿರುತ್ತೇವೆ. ಅದನ್ನು ಹೊಂದಿಕೊಂಡು ಹೋಗುವುದು ಒಳ್ಳೆಯದೆಂದು ನಾನು ತಿಳಿದುಕೊಂಡಿದ್ದೇನೆ.

ಶ್ರೀ ಎಂ. ವಿ. ರಾಜಶೇಖರನ್.—ಮಾನ್ಯ ಸಚಿವರು ಹೇಳಿದರು ನಾಲ್ಕುವರೆ ಗಂಟೆಗೆ ಕ್ಯಾಬಿನೆಟ್ ಮೀಟಿಂಗ್ ಇರುತ್ತದೆಂದು. ಕ್ಯಾಬಿನೆಟ್ ಬೇಕಾದರೆ ರಾತ್ರಿಮೇಲೆ ಇಟ್ಟುಕೊಂಡು ಬೆಳಗಿನ ಜಾವದವರೆಗೆ ಮಾಡಿ ಬೇಡವೆಂದು ಹೇಳುವುದಿಲ್ಲ, ಈವತ್ತಿನದಿವಸ ತಮಗೆ ಗೊತ್ತಿರುವಹಾಗೆ ಮೂವತ್ತು ಲಕ್ಷಕ್ಕೂಮಿಕ್ಕಿ ಜನ ಬರಗಾಲದ ದವಡೆಗೆ ಸಿಕ್ಕಿ ತೊಳಲಾಡುತ್ತಿರುತ್ತಾರೆ. ಅವರ ವಿಚಾರವಾಗಿ ಸವಿಸ್ತಾರವಾಗಿ ಪ್ರಸ್ತಾಪ ಮಾಡಬೇಕಾಗಿರುತ್ತದೆ. ಮತ್ತೆ ಇದರಬಗ್ಗೆ ಸರ್ಕಾರದ ನಿಲುವು ಏನು

ಎನ್ನುವುದನ್ನು ತಿಳಿದುಕೊಳ್ಳುವುದಕ್ಕೆ ಸಾಧ್ಯವಾಗದಿದ್ದರೆ ನಿಜವಾಗಿಯೂ ಕೂಡ ದೇಶದ ಜನತೆಗೆ ಅಪಕಾರಮಾಡಿದಂತಾಗುತ್ತದೆ. ಆದ್ದರಿಂದ ದಯವಿಟ್ಟು ತಾವು ಈ ವಿಚಾರದಲ್ಲಿ ಅಪ್ಪಣೆ ಕೊಡಿಸುವಂತಾಗಬೇಕು. ಕ್ಯಾಬಿನೆಟ್ ಮೀಟಿಂಗ್ ಬೇಕಾದರೆ ರಾತ್ರಿಇಟ್ಟುಕೊಳ್ಳಿ.

ಶ್ರೀ ಎಂ. ಎಂ. ಖಾರ್ಗೆ.—ತಾವು ಅವಕಾಶವನ್ನು ಕೊಟ್ಟರೆ ಡಿಟೇಲ್ ಸ್ಟೇಟ್‌ಮೆಂಟ್‌ನ್ನು ಈ ಸದನದಲ್ಲಿಡುತ್ತೇನೆ. ಈ ಸದನದಲ್ಲಿ ೧೫ ದಿವಸಗಳಿಂದ ಚರ್ಚೆಯಾಗಿದೆ. ಕೌನ್ಸಿಲ್‌ನಲ್ಲಿಯೂ ಕೂಡ ಚರ್ಚೆಯಾಗಿದೆ. ಡಿಟೇಲ್ ಇನ್‌ಫರ್‌ಮೇಷನ್ ಇರುತ್ತದೆ. ಅದನ್ನು ಕೊಡಲು ಅವಕಾಶಮಾಡಿಕೊಡಿ ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ವಿ. ರಾಜಶೇಖರನ್.—ಸ್ಟೇಟ್‌ಮೆಂಟ್ ಮುಖಾಂತರ ಸರ್ಕಾರ ನಡೆಸುವುದಾದರೆ ಈ ಸದನ ಇರಬೇಕಾಗಿಲ್ಲ ಸರ್ಕಾರದ ಮೂಲಗಳಾದ ಪ್ರೆಸ್ ಇರುತ್ತವೆ. ಪ್ರೆಸ್ ಮೂಲಕ ಇಡೀ ಜನತೆಗೆ ಪ್ರಸಾರ ಮಾಡಬಹುದು.

ಶ್ರೀ ಎಂ.ಎಂ. ಖಾರ್ಗೆ.—ಕೌನ್ಸಿಲ್‌ನಲ್ಲಿ ಇದರ ಬಗ್ಗೆ ಚರ್ಚೆ ನಡೆದಿರುತ್ತದೆ.

ಶ್ರೀ ಎಸ್.ಆರ್ ಬೊಮ್ಮಾಯಿ.—ಚರ್ಚೆ ನಡೆದಂಥ ಕಾಲದಲ್ಲಿ ನಾವು ಇರಲಿಲ್ಲ. ಅದಕ್ಕಾಗಿ ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ನಾವು ಹೇಳಿದೇವೆ. ಎರಡು ಗಂಟೆಗಳ ತನಕ ಚರ್ಚೆ ಮಾಡಲಿ. ಅನಂತರ ಮಾನ್ಯ ಸಚಿವರು ಉತ್ತರ ಕೊಡಲಿ.

SRI MALLIKARJUNA M. KHARGE.—This has been discussed 15 days back, In the other House also it has been discussed.

ಶ್ರೀ ಮೈಕೇಲ್ ಫೆರ್ನಾಂಡೀಸ್,—ಈಗ ತಾಮಸ್ ಪೋತಕಾಮ್‌ರವರು ತಮಿಳರಲ್ಲ. ಅವರು ತೆಲುಗಿನವರು. ಆ ಸಮಯದಲ್ಲಿ ಕನ್ನಡದವರು ಪಾದ್ರಿಗಳಾದ ಮೇಲೆ ಕನ್ನಡ ಭಾಷೆಯಲ್ಲಿಯೇ ಪೂಜೆಗಳು ಆಗಬೇಕಾಗಿತ್ತು. ಆದರೆ ಯಾವ ಕಾರಣಕ್ಕಾಗಿಯೋ ಆಗಲಿಲ್ಲ. ಆ ಸಮಯದಲ್ಲಿ ಇದ್ದ ಹಾಗೆ ಈಗಲೂ ಕೂಡ ತಮಿಳು ಪಾದ್ರಿಗಳೇ ಜಾಸ್ತಿ ಇದ್ದಾರೆ. ತಮಿಳು ಕ್ರಿಶ್ಚಿಯನ್ಸ್ ಇದ್ದಾರೆ. ಆವತ್ತಿಗೂ ಕನ್ನಡದಲ್ಲಿಯೇ ಆಗುತ್ತಿತ್ತು ಎಂದು ಹೇಳಿದರೆ ಅದು ತಪ್ಪು ಸತ್ಯಕ್ಕೆ ದೂರವಾದ ಮಾತು ಈಗ ಆರೋಗ್ಯಸ್ವಾಮಿಯವರು ಬಂದಿದ್ದಾರೆ ಅವರು ಕನ್ನಡಿಗರು, ಆದರೆ ಹುಟ್ಟಿಬೆಳೆದುದು ತಮಿಳು ನಾಡಿನಲ್ಲಿ, ಅವರು ವಿದ್ಯಾಭ್ಯಾಸ ಮಾಡಿದುದು ತಮಿಳುನಾಡಿನಲ್ಲಿ, ಅವರು ಬಿಷಪ್ ಆಗಿ ಬಂದಿದ್ದಾರೆ. ಅವರು ಬಂದಮೇಲೆ ಸ್ವಲ್ಪ ಕನ್ನಡ ಪೂಜೆಗಳು ದೇವಸ್ಥಾನದಲ್ಲಿ ನಡೆಯುತ್ತಿರುವುದು ಜಾಸ್ತಿಯಾಗಿದೆ. ಮೊದಲು ಪೋತಕಾಮ್‌ರವರು ಇದ್ದಾಗ ತಮಿಳಿನಲ್ಲಿ ಪೂಜೆಗಳು ನಡೆಯುತ್ತಿದ್ದವು.

ಶ್ರೀ ಡಿ.ಟಿ. ರಾಮು.—ಕನ್ನಡ ರಾಜ್ಯದಲ್ಲಿ ಕನ್ನಡದಲ್ಲಿಯೇ ಪೂಜೆ ಮಾಡಬೇಕು ಎಂದರೆ, ಇದು ಸರಿಯಾದುದಲ್ಲವೆಂದು ಹೇಳುವುದು ಸರಿಯಲ್ಲ.

ಶ್ರೀ ಮೈಕೇಲ್ ಫರ್ನಾಂಡೀಸ್.—ಯಾವುದು ಸರಿಯಲ್ಲವೆಂದು ಹೇಳಿದ್ದು. ನೀವು ಸರಿಯಾಗಿ ಕೇಳಿಸಿಕೊಳ್ಳಲಿಲ್ಲ. ನಾನು ಹೇಳಿದ್ದು ಕನ್ನಡ ಭಾಷೆಯಲ್ಲಿಯೇ ಪೆಚ್ಚಿನ ಪೂಜೆಗಳು ಆಗುತ್ತಿದ್ದುದು ತಾಮಸ್ ಪೋತಕಾಮ್‌ರವರು ಇದ್ದಾಗ. ಮುಂದೆ ಇಲ್ಲದಂತಾಗಿ ಹೋಗಿದೆ ಎಂದು ಹೇಳಿದುದು ಸರಿಯಾದುದಲ್ಲವೆಂದು ಹೇಳುತ್ತಿದ್ದೇನೆ.

ಶ್ರೀ ಎಂ. ಶೀರ್ನಾಳಿ ಚಂದ್ರಶೇಖರ್,—ಮತ್ತೆ ಏತಕ್ಕೆ ಬೆಂಗಳೂರಿನಲ್ಲಿ ಘರ್ಷಣೆಯಾಗುತ್ತಿದೆ,

SRI MICHAEL B. FERNANDES.—This is a problem relating to minority community You must allow met to present certain facts. ಅನೇಕ ವಿಚಾರಗಳನ್ನು ಹೇಳುವುದು ಇದ್ದರೂ ಹೇಳುವುದು ಬಹಳ ಕಷ್ಟ. ಕಾನ್‌ಸ್ಟಿಟ್ಯೂಷನಲ್ ರೈಟ್ಸ್ ಏನು ಎನ್ನುವ ಪ್ರಶ್ನೆ ಬರುತ್ತದೆ. ಈಗ ಮುಸಲ್‌ಮಾನರು ಅವರು ಉರ್ದುವಿನಲ್ಲಿ ಬೆಳಿಗ್ಗೆ ನಾಲ್ಕುವರೇ ಗಂಟೆಗೆ ಲೌಡ್‌ಸ್ಪೀಕರ್‌ನಲ್ಲಿ ಪ್ರಾರ್ಥನೆ ಮಾಡತಕ್ಕಂಥದ್ದು ಬರುತ್ತದೆ ಅರೆಬಿಕ್ ಉರ್ದುವಿನಲ್ಲಿ ಬರುತ್ತದೆ. ಈಗಿನ ಜನರ ಭಾಷೆಯಲ್ಲಿ ಬರುತ್ತಿಲ್ಲ. ನಾನು ಒಂದು ಹಿಂದು ಮದುವೆಗೆ ಹೋಗಿದ್ದೆ. ಅಲ್ಲಿಯೂ ಕೂಡ ಸಂಸ್ಕೃತದಲ್ಲಿ.....

ಶ್ರೀ ಶ್ರೀರ್ನಾಳಿ ಚಂದ್ರಶೇಖರ್.—ನೀವು ಲ್ಯಾಟಿನ್ ಭಾಷೆಯಲ್ಲಿಯೇ ತ್ರೂಟ್ ನಡೆಸಿಕೊಂಡು ಬಂದಿದ್ದರೆ ಈ ಸಮಸ್ಯೆಯೇ ಬರುತ್ತಿರಲಿಲ್ಲ. ತಾವು ಅರ್ಥ ಮಾಡಿಕೊಳ್ಳಬೇಕು.

ಶ್ರೀ ಮೈಕೇಲ್ ಫರ್ನಾಂಡೀಸ್.—ಈವತ್ತು ಕರ್ನಾಟಕದಲ್ಲಿ ಭುವನೇಶ್ವರಿ ಪೂಜೆಯಾಗುತ್ತದೆ. ಆ ಪೂಜೆಯ ಸಮಯದಲ್ಲಿ ಕನ್ನಡದಲ್ಲಿ ಪೂಜೆಯಾಗುತ್ತಿಲ್ಲ. ಸಂಸ್ಕೃತದಲ್ಲಿ ಪೂಜೆಯಾಗುತ್ತಿದೆ. ಕನ್ನಡ ರಾಜ್ಯೋತ್ಸವದ ಪೂಜೆ ಸಂಸ್ಕೃತದಲ್ಲಿ ನಡೆಯುತ್ತದೆ ಅಂದರೆ ಎಷ್ಟರಮಟ್ಟಿಗೆ ಇದೆ ನೀವೇ ಯೋಚನೆ ಮಾಡಿ. ಈ ರೀತಿಯಾದ ನೀತಿಯನ್ನು ತೆಗೆದುಕೊಂಡಿರುವುದರಿಂದಲೇ ಘರ್ಷಣೆಗೆ ಕಾರಣವಾಗುತ್ತಿದೆ. ಬಾಂಬೆಯಲ್ಲಿ ಇವತ್ತಿಗೂ ಕನ್ನಡದಲ್ಲಿಯೇ ಪೊಸ್ಟರ್ಸ್ ಹಚ್ಚಿರುವುದನ್ನು ನಾವು ನೋಡಿರುತ್ತೇವೆ. ಮೊನ್ನೆ ಬಾಂಬೆಗೆ ೧೫ ತಾರೀಖು ಆಲ್ ಇಂಡಿಯಾ ಟ್ರೇಡ್ ಯೂನಿಯನ್ ಕಾನ್‌ಫರೆನ್ಸ್‌ಗೆ ಹೋಗಿದ್ದೆ. ಅಲ್ಲಿ ಕನ್ನಡದಲ್ಲಿ ಪೋಸ್ಟರ್ಸ್ ಹಚ್ಚಿರುವುದನ್ನು ನೋಡಿದೆ. ನಾನೂರು ಐನೂರು ಮೈಲಿ ದೂರದಲ್ಲಿರ ತಕ್ಕಂಥ ಮಹಾರಾಷ್ಟ್ರದಲ್ಲಿ ಏತಕ್ಕೆ ಕನ್ನಡದ ಪೋಸ್ಟರ್ಸ್‌ನ್ನು ಬಳಸುತ್ತಿದ್ದಾರೆ ಎಂದು ಕೇಳಬಹುದು. ಇಲ್ಲಿಂದ ೧೦ ಸಾವಿರ ಮೈಲಿ ದೂರ ಇರತಕ್ಕಂಥ ನ್ಯೂಯಾರ್ಕಿನಲ್ಲಿ ಕಳೆದ ತಿಂಗಳು ಕನ್ನಡಿಗರ ಸಮ್ಮೇಳನ ನಡೆದು ಕನ್ನಡದಲ್ಲಿ ಬಳಸತಕ್ಕಂಥ ವಿಧಾನಗಳ ಬಗ್ಗೆ ತಿಳಿಸಿಕೊಟ್ಟಿದ್ದಾರೆ. ನ್ಯೂಯಾರ್ಕಿನಲ್ಲಿ ಕನ್ನಡ ಬಳಸಬಹುದಾದರೆ ಇಲ್ಲಿರತಕ್ಕ ತಮಿಳರು ಪೂಜೆ ಮಾಡುವಾಗ ಅವರ ಭಾಷೆಯಲ್ಲಿ ಮಾಡ ಬಾರದೆ..

ಶ್ರೀ ಎಸ್.ಎಂ. ಶ್ರೀರ್ನಾಳಿ ಚಂದ್ರಶೇಖರ್. —ನಾವು ಬದಲಾವಣೆ ಮಾಡುತ್ತಾ ಇದ್ದೇವೆ.

ಶ್ರೀ ಮೈಕೇಲ್ ಬಿ. ಫರ್ನಾಂಡಿಸ್.—ನಿಮಗೆ ಸತ್ಯಾಂಶ ಗೊತ್ತಿಲ್ಲ. ನನಗೊತ್ತಿದೆ. ನಾನು ಅದರ ಬಗ್ಗೆ ಒಂದು ಪೀಸ್ ಕಮಿಟಿ ಕೂಡ ಸೆಟ್ ಆಫ್ ಮಾಡಿ, ಸೌಹಾರ್ದಯುತವಾಗಿ ಅಲ್ಲಿರತಕ್ಕಂಥ ಭಿನ್ನಾಭಿಪ್ರಾಯಗಳನ್ನು ಹೋಗಲಾಡಿಸುವುದಕ್ಕೆ ಪ್ರಯತ್ನ ಮಾಡಿದ್ದೇನೆ. ನನಗೆ ಇದರ ಬಗ್ಗೆ ಚೆನ್ನಾಗಿ ಗೊತ್ತಿದೆ. ನಾನು ತಿಳುವಳಿಕೆಯಿಂದ ಹೇಳುತ್ತಿದ್ದೇನೆ. ಈ ಒಂದು ಧೋರಣೆಯನ್ನು ಕೆಲವರು ತೆಗೆದುಕೊಂಡು ಅದರ ಬಗ್ಗೆ ಘರ್ಷಣೆಯ ದಾರಿಯಲ್ಲಿ ಹೋಗುತ್ತಾ ಇದ್ದಾರೆ. ಇದನ್ನೇ ಮುಂದುವರಿಸಿ ಕೊಂಡು ಹೋಗುವುದಾದರೆ ಬಹಳ ಕಷ್ಟವಾಗುತ್ತದೆ. ಮದ್ರಾಸಿನಲ್ಲಿ ಐನಾವರಂ ಕರ್ನಾಟಕ ಸಂಘ, ಕನ್ನಡ ಕಸ್ತೂರಿ ಇರಬೇಕು ಎಂದು, ಹೇಳಿ ಆ ಸರ್ಕಾರ ಈ ಸರ್ಕಾರಕ್ಕೆ ಬರೆದು ಧನಸಹಾಯ ಪಡೆಯತಕ್ಕ ಪರಿಸ್ಥಿತಿ ಇದೆ. ಬಾಂಬೆಯಲ್ಲಿ ಕನ್ನಡ ಸಂಘಗಳು. ಕನ್ನಡ ಚಟುವಟಿಕೆಗಳು ಎಷ್ಟೋ ಆಗುತ್ತಾ ಇವೆ. ಆದುದರಿಂದ ಇದಕ್ಕೆಲ್ಲಾ ಧಕ್ಕೆ ತಂದ ಹಾಗೆ ಆಗುತ್ತದೆ. ನಾವು ಇದನ್ನು ಸವಿಸ್ತಾರವಾಗಿ ಕಾರಣಬೇಕೇ ವಿನಹ ಸಂಕುಚಿತ ಭಾವನೆಯಿಂದ ಕಾಣಬಾರದು. ಅದರಲ್ಲೂ ಕ್ರಿಶ್ಚಿಯನ್ನರು ಬಹಳ ಮೈನಾರಿಟಿ ಕಮ್ಯುನಿಟಿ, ತಮಿಳರು ಕರ್ನಾಟಕದಲ್ಲಿ ಚಿಕ್ಕ ಮೈನಾರಿಟಿ. ಅವರನ್ನು ಟಿಸ್ಟಿಂಗ್ ಗ್ರಾಂಡ್, ನಿಮ್ಮ ಫೈಟಿಂಗ್ ಬ್ಯಾಟ್ಸ್ ಗ್ರೌಂಡ್ ಎಂದು ಮಾಡಿಕೊಂಡರೆ, ಕನ್ನಡ ಭಾಷೆಯ ಹೆಸರಿನಲ್ಲಿ ರಾಜಕಾರಣ ಮಾಡಿ ಕೊಂಡರೆ ಕಷ್ಟವಾಗುತ್ತದೆ. ಬೇರೆ ವಿಚಾರ ಅಂದರೆ ಕನ್ನಡ ಸಿನೆಮಾ ಓನರ್ಸ್ ಕನ್ನಡ ಫಿಲಂ, ತಮಿಳು ಫಿಲಂ ಹಾಕಿಕೊಳ್ಳುತ್ತಾರೆ. ಕ್ರಿಶ್ಚಿಯನ್ನರು ಅವರ ಭಾಷೆಯಲ್ಲಿ, ತಮಿಳರು ಅವರ ಭಾಷೆಯಲ್ಲಿ, ಕೊಂಕಣಿಯವರು ಅವರ ಭಾಷೆಯಲ್ಲಿ ಪೂಜೆ ಮಾಡಬಾರದು, ಕನ್ನಡದಲ್ಲೇ ಮಾಡಬೇಕು ಎಂದು ಹೇಳುವುದು ತಪ್ಪು. ಕನ್ನಡವರಿಗೆ ಅವಕಾಶ ಮಾಡಿ ಕೊಡಲಾಗಿದೆ, ಅದಕ್ಕೆ ಪ್ರಯತ್ನ ಮಾಡೋಣ. ಅದನ್ನು ಮಾಡುವಾಗ ಈ ರೀತಿ ಕೆಟ್ಟ ದಾರಿಯಲ್ಲಿ, ಈ ಸಮಸ್ಯೆಯನ್ನು ತೆಗೆದುಕೊಂಡು ಹೋಗುವುದು ತಪ್ಪು ಎಂದು ಹೇಳುತ್ತೇನೆ. ಇನ್ನೂ ಅನೇಕ ವಿಚಾರಗಳು ಹೇಳುವುದಿತ್ತು, ತಾವು ಬೆಲ್ ಹೊಡೆಯುತ್ತಿರುವುದರಿಂದ ಇಷ್ಟು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ. ಭಾಸ್ಕರ ನಾಯ್ಕ್.—ಮಾನ್ಯ ಅಧ್ಯಕ್ಷರೆ, ಸಂಜೆ ಆದ ಕೂಡಲೆ ಸ್ಕ್ಯಾಚ್ ವಿಸ್ಕಿ ಕುಡಿಯಿರಿ ತ್ತೇವೆ ನೋಡಿ, ಸ್ವಾಮಿ, ಅದರ ಲೇಬಲ್ ಕೂಡ ಕನ್ನಡದಲ್ಲೇ ಪ್ರಿಂಟಾಗಲಿ, ನಮಗೆ ಸ್ಕ್ಯಾಚ್ ವಿಸ್ಕಿ ಎಂದು ಇಂಗ್ಲೀಷಿನಲ್ಲಿರಬಾರದು.

ಶ್ರೀ ಪಿ. ಎಫ್. ರೋಡ್ರಿಗ್ಸ್ (ಮಂಗಳೂರು).—ಮಾನ್ಯ ಅಧ್ಯಕ್ಷರೆ, ಈ ಒಂದು ಸೂಚನೆಯನ್ನು ಇವತ್ತಿನ ನಮ್ಮ ಅಜೆಂಡಾದಲ್ಲಿ ನೋಡಿ ನನಗೆ ವಿಸ್ಮಯವಾಯಿತು. ನಾವು ಕಡ್ಡಾಯವಾಗಿ ಪ್ರತಿ ಭಾನುವಾರದ ದಿವಸ ನಮ್ಮ ದೇವಾಲಯಕ್ಕೆ ಹೋಗಬೇಕು, ಪೂಜೆ ಸಲ್ಲಿಸಬೇಕು, ಮಾತ್ರವಲ್ಲದೆ ಕೆಲವು ಪವಿತ್ರವಾದ ದಿನಗಳಿವೆ, ಆ ದಿನಗಳಲ್ಲಿ ಹೋಗಬೇಕು. ಕಾರಣವೇನೆಂದರೆ ನಾನು ಒಂದು ಪ್ರದೇಶದಿಂದ

ಶಾಸಕನಾಗಿ ಬಂದಿದ್ದೇನೆ. ನನಗೆ ಕನ್ನಡ ಭಾಷೆ ಗೊತ್ತಿಲ್ಲದ ಪಕ್ಷದಲ್ಲಿ, ಮತ್ತು ಕನ್ನಡದಲ್ಲಿ ನನ್ನ ಪ್ರಾರ್ಥನೆ ನಡೆಯಬೇಕಾದ ಪಕ್ಷದಲ್ಲಿ ಯಾವ ತರಹ ಆ ಪ್ರಾರ್ಥನೆಯಲ್ಲಿ ನಾನು ಭಾಗವಹಿಸುವುದು ಎಂದು ನಾನು ಕೇಳುತ್ತಾ ಇದ್ದೇನೆ. ಇವತ್ತು ನಮ್ಮ ಕ್ರೈಸ್ತ ಸಮಾಜದಲ್ಲಿ ತಮಿಳು ಭಾಷೆ ಗೊತ್ತಿದ್ದವರು ಮಾತ್ರ ಇದ್ದಾರೆ, ಅವರಿಗೆ ತಮಿಳು ಗೊತ್ತಿದೆ. ಕನ್ನಡ ಗೊತ್ತಿಲ್ಲದ ಪಕ್ಷದಲ್ಲಿ ಯಾವ ನೆಲದಲ್ಲಿ ಅವರು ಪ್ರಾರ್ಥನೆ ಮಾಡಬೇಕು. ಆದುದರಿಂದ ಈ ವಿಚಾರವನ್ನು ಸದನದ ಮುಂದೆ ತಂದಿದ್ದು ನಿಜವಾಗಿಯೂ ಶೋಚನೀಯ, ಮಾನ್ಯ ಶೀರ್ನಳ್ಳಿ ಚಂದ್ರಶೇಖರ್ ಅವರು ಇವತ್ತು ಅವರು ತಮಿಳು ನಾಡಿಗೆ ಹೋಗಬೇಕು, ನಾವು ಕನ್ನಡಿಗರ ವಿರುದ್ಧ, ಕನ್ನಡ ನಾಡಿಗೆ ವಿರುದ್ಧ ಎಂದು ನಮ್ಮ ಮೇಲೆ ಆಪಾದನೆ ಮಾಡಿದ್ದಾರೆ ಇದು ಬಹಳ ಶೋಚನೀಯ. ನನ್ನ ಮಿತ್ರರಾದ ಮಾನ್ಯ ಮೈಕೇಲ್ ಫರ್ನಾಂಡೀಸ್ ಅವರು ಹೇಳಿದಂತೆ, ಇವತ್ತು ಮಸೀದಿಗಳಲ್ಲಿ ಕನ್ನಡದಲ್ಲಿ ಪ್ರಾರ್ಥನೆ ನಡೆಯುತ್ತಿದೆಯೇ, ಹಿಂದೂ ದೇವಾಲಯಗಳಲ್ಲಿ ಯಾವ ಭಾಷೆಯಲ್ಲಿ ಪ್ರಾರ್ಥನೆ ನಡೆಯುತ್ತಾ ಇದೆ. ಆದುದರಿಂದ ಈ ವಿಚಾರವನ್ನು ಇಲ್ಲಿ ತರಬಾರದಿತ್ತು. ನಮ್ಮ ನಮ್ಮ ಇಚ್ಛೆ ಪ್ರಕಾರ ನಮ್ಮ ನಮ್ಮ ಭಾಷೆಯಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇವೆ. ಅದಕ್ಕೆ ಸರ್ಕಾರದ ವತಿಯಿಂದ ಆದೇಶ ನೀಡಿ ಎಂದು ಹೇಳಲಿಕ್ಕೆ ಅವರಿಗೆ ಯಾವ ಅಧಿಕಾರ ಇದೆ ಎಂದು ಕೇಳುತ್ತಾ ಇದ್ದೇನೆ. ಇಷ್ಟು ಹೇಳಿ, ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಚ್. ಟಿ. ಕೃಷ್ಣಪ್ಪ (ನಾಗಮಂಗಲ).-ಮಾನ್ಯ ಅಧ್ಯಕ್ಷರೆ, ನಮ್ಮ ಮನಸ್ಸಿಗೆ ಅತೀವವಾದಂಥ ನೋವನ್ನು ಉಂಟುಮಾಡಿರತಕ್ಕಂಥಾದ್ದು ಏನೆಂದರೆ, ತಮಿಳು ಭಾಷೆ ಮಾತನಾಡತಕ್ಕವರು ತಮಿಳಿನಲ್ಲಿ ಪ್ರಾರ್ಥನೆ ಮಾಡಿಕೊಂಡರೆ ಏನೂ ನೋವು ಇಲ್ಲ, ಕನ್ನಡ ಭಾಷೆಯನ್ನು ಆಡತಕ್ಕ ಜನ, ಕನ್ನಡ ನೆಲದಲ್ಲಿ ಆ ಭಾಷೆಯಲ್ಲಿ ಪ್ರಾರ್ಥನೆ ಮಾಡಬೇಕು ಎಂದು ಹೊರಟಾಗ ಅವರ ಸ್ವಾತಂತ್ರ್ಯವನ್ನು ಹರಣಮಾಡತಕ್ಕ ಪ್ರಯತ್ನ ಮಾಡಿದಾಗ ನಮಗೆ ನೋವಾಗುತ್ತದೆ.

ಶ್ರೀ ಮೈಕೇಲ್ ಬಿ. ಫರ್ನಾಂಡೀಸ್.—ಅವರಿಗೆ ಅವಕಾಶಮಾಡಿಕೊಟ್ಟಿದೆ. ನೀವು ತಿಳಿದುಕೊಂಡಿರುವುದು ತಪ್ಪು, ಆ ರೀತಿ ಇಲ್ಲ.

ಶ್ರೀ ಎಚ್. ಟಿ ಕೃಷ್ಣಪ್ಪ.—ಆ ರೀತಿ ಇಲ್ಲದೇ ಇದರೆ ಸಂತೋಷ. ಒಂದು ವಿಚಾರ ಹೇಳುತ್ತೇನೆ ಇಡೀ ಭಾರತ ದೇಶದಲ್ಲಿ ಇಂಥಾ ಒಂದು ಕೆಟ್ಟ ಪರಿಸ್ಥಿತಿ ಇರಬಾರದು. ನಾವು ಆಯಾ ಭಾಷೆಯನಾಡತಕ್ಕ, ಭಾಷೆಯ ಆಧಾರದ ಮೇಲೆ ಪ್ರಾಂತ್ಯಗಳನ್ನು ರಚನೆ ಮಾಡಿಕೊಂಡಿದ್ದೇವೆ. ಏಕೆಂದರೆ ಕರ್ನಾಟಕದಲ್ಲಿ ಮಾತ್ರ ಇಂಥಾದ್ದು ನಡೆಯಲಿಕ್ಕೆ ಸಾಧ್ಯ. ಇವರು ದಾಕ್ಷಿಣ್ಯ ಪ್ರವೃತ್ತಿ ಜನ ಮತ್ತು ಆಲಸ್ಯ ಪ್ರವೃತ್ತಿ ಜನವೂ ಹೌದು. ಆದರೆ ಒಂದು ಸಾರಿ ಕೆರಳಿ ಕೊಡವಿ ನಿಂತಾಗ ಅದರಿಂದ ಬಹಳ ದುಷ್ಪರಿಣಾಮವಾಗುತ್ತದೆ. ಭಾಷೆ ಒಂದು ಗೂಡಿಸತಕ್ಕ ಸಾಧನ. ಒಂದೇ ಭಾಷೆಯನ್ನು ಆಡತಕ್ಕ ಜನ ಒಂದು ಕಡೆ ಸೇರಬೇಕಾದ್ದು ಸಮಾಜಶಾಸ್ತ್ರ ಗೊತ್ತಿರುವವರೆಲ್ಲರೂ ಅರ್ಥಮಾಡಿಕೊಂಡಿರತಕ್ಕಂಥಾದ್ದು. ಒಂದು ಕಡೆ, ಅವರು ಒಂದೇ ಭಾಷೆಯಲ್ಲಿ ಪ್ರಾರ್ಥನೆ ಸಲ್ಲಿಸುವುದಕ್ಕೆ ಹೊರಟಾಗ, ಅದಕ್ಕೆ ಪ್ರತಿಯಾಗಿ, ಅದಕ್ಕೆ ವಿರುದ್ಧವಾಗಿ ಯಾರಾದರೂ ಕೂಡ ಸ್ವಾತಂತ್ರ್ಯವನ್ನು ಕಿತ್ತುಕೊಳ್ಳತಕ್ಕ ಪ್ರಯತ್ನ ಮಾಡಿದಾಗ, ಅವರು ಸಿಡಿದು ಏಳಲೇಬೇಕು, ಅವರು ಮಾತ್ರವಲ್ಲ, ಇಡೀ ಕರ್ನಾಟಕವೇ ಸಿಡಿದು ಏಳತಕ್ಕ ಪರಿಸ್ಥಿತಿ ಬರುತ್ತದೆ. ಅದಕ್ಕೆ ಅವಕಾಶ ಕೊಡುವುದು ಬೇಡ. ಅವರವರ ಭಾಷೆಯಲ್ಲಿ ವಲ್ಯಾಕಾಲರ್ ಎಂದು ಏನು ಹೇಳುತ್ತೇವೆ ಅದು ವಿಸ್ತಾರವಾಗಿದೆ. ತಮಿಳರು ಬೆಂಗಳೂರಿನಲ್ಲಿ ಅವರ ಭಾಷೆಯಲ್ಲಿ ಅವರು ಪ್ರಾರ್ಥನೆ ಮಾಡಿಕೊಂಡರೆ ವಿರೋಧವಿಲ್ಲ. ಕನ್ನಡಿಗರು ಕನ್ನಡ ಭಾಷೆಯಲ್ಲಿ ಪ್ರಾರ್ಥನೆ ಮಾಡಬೇಕು ಅಂದಾಗ ಇವರಿಗೆ ಕ್ಷಣ್ಣುರಿ ಏಕೆ ಬರಬೇಕು, ಹೊಟ್ಟೆ ಉರಿ ಏಕೆ ಬರಬೇಕು. ಕನ್ನಡಿಗರ ಸ್ವಾತಂತ್ರ್ಯವನ್ನು ಈ ವಿಚಾರದಲ್ಲಿ ಹರಣಮಾಡತಕ್ಕ ಪ್ರಯತ್ನ ಅಥವಾ ಶಕ್ತಿ ಯಾವುದಾದರೂ ಕೂಡ ಇದ್ದರೆ, ಅದಕ್ಕೆ ಪ್ರಯತ್ನ ವಹಿಸಿದರೆ, ಅದನ್ನು ತೀವ್ರವಾದಂಥ ರೀತಿಯಲ್ಲಿ ವಿರೋಧಿಸತಕ್ಕಂಥಾದ್ದು ಸರ್ಕಾರದ ಕರ್ತವ್ಯ. ಸರ್ಕಾರ ಮಾಡದೇ ಹೋದರೆ ಕನ್ನಡಿಗರು ಮಾಡೇ ಮಾಡುತ್ತಾರೆ, ಇಷ್ಟು ಹೇಳಿ, ನನ್ನ ಮಾತನ್ನು ಮುಗಿಸುತ್ತೇನೆ.

SRI B. B. SAYANAK.—Mr Deputy Speaker, Sir, India is a secular State and we have 14 official languages. Each individual has got liberty to pray God in their own mother-tongue. For example,

Christians will pray in Tamil, Muslims will pray in urdu and we pray in Marathi. This being the position, why do you want to impose restriction on other community people? There should not be any restriction in religious matters. If at all you want to impose any restriction you can do so whenever a person seeks employment in Karnataka. It is not correct on the part of the Government to impose restriction. We have received our cheques written in kannada and as a protest, we the members of M.E.S. will stage a walk out.

(*The members belonging to M.E.S. withdrew from the House*)

ಶ್ರೀ ಎಸ್. ಎಂ. ಶೀನಾಳಿ ಚಂದ್ರಶೇಖರ್.—ಸ್ವಾಮಿ ಊಟಕ್ಕೆ ಹೊತ್ತು ಆಯಿತು ಅದಕ್ಕೆ ಎದ್ದು ಹೋಗುತ್ತಿದ್ದಾರೆ.

ಶ್ರೀ ಎಚ್. ಟಿ. ಕೃಷ್ಣಪ್ಪ.—ಇವರ ಈ ಕಾಯಿಲೆಗೆ ಏನು ಮಾಡಬೇಕು ಎನ್ನುವುದೇ ಅರ್ಥ ವಾಗುತ್ತಿಲ್ಲ.

SRI V. B. BHAVI.–Sir, our cheques have been written in Kannada.

ಶ್ರೀ ಎಂ. ವೀರಪ್ಪಮೊಯ್ಲಿ.—ಸನ್ಮಾನ್ಯ ಅಧ್ಯಕ್ಷರೇ, ಬೆಂಗಳೂರು ನಗರದಲ್ಲಿ ಹಲವಾರು ಕಡೆ ಕ್ಯಾಥೊಲಿಕ್ ಸಮಾಜದ ದೇವಸ್ಥಾನಗಳಲ್ಲಿ ತಮಿಳಿನಲ್ಲೂ ಪ್ರಾರ್ಥನೆ ಮಾಡುತ್ತಿದ್ದಾರೆ ಎಂಬುದು ವಾಸ್ತವಿಕವಾದ ಸಂಗತಿ. ಈ ಬಗ್ಗೆ ಕನ್ನಡ ಕ್ರಿಶ್ಚಿಯನ್ನರ ಒಂದು ಗುಂಪು ಕನ್ನಡದಲ್ಲಿಯೇ ಪ್ರಾರ್ಥನೆ ಮಾಡಬೇಕೆಂ ಎಂದು ಚಳುವಳಿ ಮಾಡಿದರು. ಯಾವುದೇ ದೇವಾಲಯಗಳಾಗಿರಲಿ ಅದು ಕ್ರಿಶ್ಚಿಯನ್ ದೇವಾಲಯವಾಗಿರಬಹುದು, ಇಲ್ಲವೇ ಇನ್ನು ಯಾವುದೇ ಧಾರ್ಮಿಕ ದೇವಾಲಯಗಳಲ್ಲಿ ಯಾವ ಭಾಷೆ ಯನ್ನು ಉಪಯೋಗ ಮಾಡಬೇಕು ಬಿಡಬೇಕು ಎನ್ನುವುದು ಅವರವರ ಆಂತರಿಕ ಸಮಸ್ಯೆ. ಅದು ಅವರಿಗೇ ಬಿಟ್ಟಿದ್ದು. ಇದರಲ್ಲಿ ಸರ್ಕಾರ ಕೈ ಹಾಕಿ ಸರಿ ಮಾಡುವುದಕ್ಕೆ ಬರುವುದಿಲ್ಲ. ಆದಂದರಿಂದ ಈ ಸಂಬಂಧದಲ್ಲಿ ಆಥವಾ ಚಳುವಳಿಯ ಹಿನ್ನೆಲೆಯಲ್ಲಿ ಏನಾದರೂ ಗೊಂದಲ, ಗಲಾಟೆ ಆದರೆ ಆಗ ಮಾತ್ರ ಸರ್ಕಾರ ಪ್ರವೇಶ ಮಾಡಿ ಅಲ್ಲಿ ನೆಮ್ಮದಿಯನ್ನು ಸ್ಥಾಪನೆ ಮಾಡುವುದಕ್ಕೆ ಏನು ಕ್ರಮ ತೆಗೆದು ಕೊಳ್ಳಬೇಕೋ, ಆ ಬಗ್ಗೆ ಖಂಡಿತವಾಗಿಯೂ ಕ್ರಮ ತೆಗೆದುಕೊಳ್ಳುತ್ತದೆ. ಮೊನ್ನೆ ಈ ಭಾಷೆಯ ಬಗ್ಗೆ ಗಲಾಟೆಯಾದಾಗ ಮಾನ್ಯ ಮಂಖ್ಯಿ ಮಂತ್ರಿಗಳವರು ನಮ್ಮ ಕರ್ನಾಟಕ ರಾಜ್ಯದ ಆರ್ಚ್‌ಬಿಶಪ್‌ರವರೊಡನೆ ಮಾತನಾಡಿ ಅಲ್ಲಿ ಶಾಂತಿಯನ್ನು ಸ್ಥಾಪನೆ ಮಾಡುವುದಕ್ಕೆ ಏನ ಕ್ರಮವನ್ನು ಕೈಗೊಳ್ಳಬೇಕೋ ಆದನ್ನು ಕೈಗೂಂಡಿದ್ದಾರೆ. ಆದುದರಿಂದ ಧರ್ಮದ ವಿಷಯದಲ್ಲಿ ಸರ್ಕಾರ ನೇರವಾಗಿ ತಲೆ ಹಾಕುವುದಕ್ಕೆ ಆಗುವುದಿಲ್ಲ. ಆದುದರಿಂದ ಇನ್ನು ಅನೇಕ ವಿಷಯಗಳನ್ನು ಕ್ಯಾಥೂಲಿಕ್ ಧರ್ಮದ ಬಗ್ಗೆ ಹೇಳಿರುವುದರಿಂದ ಆ ಬಗ್ಗೆ ಸರ್ಕಾರ ಏನೂ ಹೇಳುವುದಕ್ಕೆ ಬಯಸುವುದಿಲ್ಲ.

ಶ್ರೀ ಕೆ. ಭಾಸ್ಕರನಾಯ್ಡು.–ಅಧ್ಯಕ್ಷರೇ, ಇಲ್ಲಿ ನನಗೊಂದು ಚೆಕ್ಕನ್ನು ಕೊಟ್ಟಿದ್ದಾರೆ. ಟಿ.ಎ.ಡಿ.ಎಗೆ ಸಂಬಂಧಪಟ್ಟಿದ್ದು ಇದು ಯಾರಿಗೆ ಎಷ್ಟು ರೊಕ್ಕ ಕೊಟ್ಟಿದ್ದಾರೆ ಎನ್ನುವುದು ಗೊತ್ತಾಗುವುದಿಲ್ಲ. ಇದನ್ನು ಕನ್ನಡದಲ್ಲಿ ಬರೆದಿದ್ದಾರೆ. ದಯಮಾಡಿ ನಮಗೆ ಇಂಗ್ಲೀಷ್‌ನಲ್ಲಿಯೇ ಚೆಕ್‌ಗಳನ್ನು ಕೊಡಬೇಕು ಸ್ವಾಮಿ ಏತಕ್ಕೆಂದರೆ ನನಗೆ ಕನ್ನಡ ಭಾಷೆ ಓದುವುದಕ್ಕೆ ಬರುವುದಿಲ್ಲ.

ಶ್ರೀ ಜಿ. ಕೆ. ತಕ್ಕೇಡ್.—ಕನ್ನಡದಲ್ಲಿಯೇ ಭಾಸ್ಕರ್ ನಾಯ್ಡು ಎಂದು ಸೈನ್ ಮಾಡಿ ಕೊಡಿ

SRI K. BHASKAR NAIDU .— If I receive somebody's cheque ? I do not know Kannada.

MR. DEPUTY SPEAKER .— I will look into it.

ಕೆ. ಭಾಸ್ಕರ್ ನಾಯ್ಡು .— ಯಾರಿಗೆ ಕನ್ನಡದಲ್ಲಿ ಬೇಕೋ ಅವರಿಗೆ ಕನ್ನಡದಲ್ಲಿಯೇ ಚೆಕ್‌ನ್ನು ಕೊಡಿ. ... I have been taught Telugu and English. I do not wish the cheques to be written in Telugu. I want the cheque to be written

in English. You must know that I am a minority language man. We have been granted certain rights under the Constitution. We nave been given some protection under the Constitution.

MR. DEPUTY SPEAKER.— I will see that your rights are protected. I will see that something is done in this regard. You have got every right to send the cheque back.

(iv) Relieving Temporary Teachers of Primary Schools Kolar, against The Stay order of High Court.

ಶ್ರೀ ಪಿ. ಎನ್. ರೆಡ್ಡಿ .— ಅಧ್ಯಕ್ಷರೇ, ಹಂಗಾಮಿ ಉಪಾಧ್ಯಾಯರುಗಳನ್ನು ಸರ್ಕಾರದವರು ತೆಗೆದು ಹಾಕಿರುವ ಬಗ್ಗೆ ಏತಕ್ಕೆ ರೂಲ್ ೩೧೨ರ ಕೆಳಗೆ ತಂದಿದ್ದೇನೆ ಎಂದರೆ, ಪಾಪ ಅನೇಕ ಬಡ ಉಪಾಧ್ಯಾಯರುಗಳು ಅದರಲ್ಲೂ ಶೋಷಿತವರ್ಗಕ್ಕೆ ಸೇರಿದವರು ಸುಮಾರು ಒಂದು,ಒಂದೂವರೆ ವರ್ಷಗಳಿಂದ ಕೆಲಸ ಮಾಡುತ್ತಿದ್ದರು. ಈಗ ಅವರನ್ನು ತೆಗೆದು ಹಾಕಿರತಕ್ಕದ್ದು ನಿಜವಾಗಿಯೂ ಬಹಳ ಮುಖ್ಯವಾದ ವಿಚಾರವಾಗಿದೆ. ಸರ್ಕಾರದವರ ಧೋರಣೆ ಏನಿದೆ. ಹೊಸದಾದ ಕಾನೂನಿನ ರೀತಿಯಲ್ಲಿ ಉದ್ಯೋಗಿಗಳನ್ನು ಆರಿಸಿರುವ ಬಗ್ಗೆ, ನಾನು ಆಗಲೇ ಅಭಿನಂದನೆಗಳನ್ನು ಸಲ್ಲಿಸಿದ್ದೇನೆ ಆದರಲ್ಲಿ ನನ್ನದೇನೂ ಅಭ್ಯಂತರವಿಲ್ಲ. ಆದರೆಈ ಹಂಗಾಮಿ ಉಪಾಧ್ಯಾಯರುಗಳೇನಿದ್ದರು ಅವರು ಈಗ ನಿರುದ್ಯೋಗಿಗಳಾಗಿದ್ದಾರೆ. ಅವರ ಸಂಸಾರಿಕ ದೃಷ್ಟಿಯಿಂದ ಹಾಗೂ ಅವರ ಜೀವನೋಪಾಯದ ದೃಷ್ಟಿಯಿಂದ, ಸರ್ಕಾರದವರು ಏತಕ್ಕೆ ಇನ್ನೂ ಹೆಚ್ಚಿನ ಗಮನ ಕೊಟ್ಟಿಲ್ಲ. ಅಥವಾ ಆದ್ಯತೆ ಕೊಟ್ಟಿಲ್ಲ ಎನ್ನುವುದು ನನ್ನ ಮುಖ್ಯವಾದ ವಿಷಯವಾಗಿದೆ. ಈಗ ಸರ್ಕಾರದವರು ನಮ್ಮ ಕೋಲಾರ ಜಿಲ್ಲೆಯಲ್ಲಿ ೬೦೦ಕ್ಕೂ ಹೆಚ್ಚು ಉಪಾಧ್ಯಾಯರುಗಳ ಜಾಗ ಖಾಲಿ ಇತ್ತು ಎಂದು ನಾನು ಭಾವಿಸಿಕೊಂಡಿದ್ದೇನೆ ಆದರಲ್ಲಿ ಸರ್ಕಾರದವರು ಕೇವಲ ೨೦೦, ೨೫೦ ಸ್ಥಾನಗಳನ್ನು ಮಾತ್ರ ಭರ್ತಿ ಮಾಡಿದ್ದಾರೆ. ಇನ್ನೂ ಹೆಚ್ಚಿನ ಉಪಾಧ್ಯಾಯರುಗಳು ಬೇಕಾಗಿದ್ದಾರೆಂದು ನಾನು ತಿಳಿದುಕೊಂಡಿದ್ದೇನೆ. ಕೆಲವು ಹಂಗಾಮಿ ಉಪಾಧ್ಯಾಯರುಗಳು ಹೈಕೋರ್ಟಿಗೆ ಹೋಗಿ ಸ್ಟೇ ತೆಗೆದುಕೊಂಡು ಬಂದಿದ್ದಾರೆ. ಅಂಥವರನ್ನು ಪುನ: ಕೆಲಸಕ್ಕೆ ತೆಗೆದುಕೊಂಡಿಲ್ಲ. ಈಗ ಕೋರ್ಟಿಗೆ ಅವರು ಹೋಗಿರುವುದರಿಂದ ಅಲ್ಲಿ ಏನು ತೀರ್ಮಾನವಾಗಿ ಬರುತ್ತದೆಯೋ ಬರಲಿ ಅದನ್ನು ನಾನು ಇಲ್ಲಿ ಪ್ರಶ್ನಿಸುವುದಿಲ್ಲ. ಆಕಸ್ಮಾತ್ ಅವರ ಪರವಾಗಿ ಪಿಟಿಷನ್ ಆಗದಿದ್ದರೆ ಅದು ಅವರ ಆದೃಷ್ಟ ಹೇಗೆ ಇದೆಯೋ ಆ ರೀತಿ ಆಗಲಿ. ಆದರೆ, ಈಗ ಕೆಲವು ಹಂಗಾಮಿ ಉಪಾಧ್ಯಾಯರುಗಳು ಡಿ. ಡಿ. ಪಿ. ಐ, ಆಫೀಸರ್‌ರವರ ಕಚೇರಿಯ ಮುಂದೆ ಮುಷ್ಕರವನ್ನು ಹೂಡಿದ್ದಾರೆ. ಅವರ ಉದ್ಯೋಗ ಮುಂದುವರಿಯಬಹುದೆಂದು ಕೆಲವರು ಮದುವೆಮಾಡಿಕೊಂಡಿದ್ದಾರೆ. ಆದುದರಿಂದ,ಈಗ ಅವರು ಸಂಸಾರ ಸಮೇತವಾಗಿ ಮುಷ್ಕರದಲ್ಲಿ ಭಾಗವಹಿಸಬೇಕಾಗಿದೆ. ಆದುದರಿಂದ ಮಾನ್ಯ ಅರ್ಥ ಮಂತ್ರಿಗಳವರು ಹಾಗೂ ಪ್ರೈಮರಿ ವಿದ್ಯಾಭ್ಯಾಸದ ಮಂತ್ರಿಗಳವರು ಬಹಳ ಒಳ್ಳೆಯ ಕೆಲಸವನ್ನು ಮಾಡುತ್ತಿರುವುದರ ಜೊತೆಗೆ ಈ ೩೨೦ ಹುದ್ದೆಗಳು ಇನ್ನೂ ಏನುಖಾಲಿಇದೆ ಅಲ್ಲಿಗೆ ಈಗ ಯಾರು ಯಾರು ಶೋಷಿತ ವರ್ಗದವರು ನಿರುದ್ಯೋಗಿಗಳಾಗಿದ್ದಾರೆ. ಅಂಥವರನ್ನು ತೆಗೆದುಕೊಂಡರೆ ನಿಜವಾಗಿಯೂ ಅವರ ಸಂಸಾರಕ್ಕೆ ಸಹಾಯ ಮಾಡಿದಹಾಗಾಗುತ್ತದೆ. ಜೊತೆಗೆ ಅನೇಕ ಶಾಲೆಗಳಲ್ಲಿ ಉಪಾಧ್ಯಾಯರುಗಳು ಸರಿಯಾಗಿ ಸಾಕಷ್ಟು ಸಂಖ್ಯೆಯಲ್ಲಿ ಇಲ್ಲ. ಆದುದರಿಂದ ಈಗ ಖಾಲಿ ಇರುವ ಸ್ಥಾನಗಳಿಗೆ ಈ ಹಂಗಾಮಿ ಉಪಾಧ್ಯಾಯರುಗಳನ್ನು ಅಲ್ಲಿಗೆ ಹಾಕಿದರೆ ಆ ಹುದ್ದೆಗಳನ್ನು ಭರ್ತಿ ಮಾಡಿದ ಹಾಗೂ ಆಗುತ್ತದೆ. ಇದಕ್ಕೆ ಸರ್ಕಾರದವರು ದೊಡ್ಡ ಮನಸ್ಸು ಮಾಡಿ ಸೂಕ್ತವಾದ ಕ್ರಮವನ್ನು ಶೀಘ್ರವಾಗಿ ತೆಗೆದುಕೊಳ್ಳುತ್ತಾರೆಂದು ಆಶಿಸಿ ಮಾನ್ಯ ವಿದ್ಯಾ ಮಂತ್ರಿಗಳವರು ಇದಕ್ಕೆ ಏನಾದರೂ ಆಶ್ವಾಸನೆ ಕೊಡುತ್ತಾರೆಯೇ ಎಂದು ಮಾನ್ಯ ಅಧ್ಯಕ್ಷರ ಮುಖಾಂತರ ಕೇಳಿಕೊಳ್ಳುತ್ತೇನೆ.

ಶ್ರೀಮತಿ ನಾಗಮ್ಮ ಕೇಶವ ಮೂರ್ತಿ .— ಮಾನ್ಯ ಅಧ್ಯಕ್ಷರೇ, ಇಡೀ ರಾಜ್ಯದಲ್ಲಿ ಸುಮಾರು ೭ಸಾವಿರ ಪ್ರಾಥಮಿಕ ಶಾಲಾ ಉಪಾಧ್ಯಾಯರುಗಳ ಹುದ್ದೆಗಳು ಖಾಲಿ ಇತ್ತು. ಉಪಾಧ್ಯಾಯರುಗಳು ಇಲ್ಲದೇ ಶಾಲೆಗಳೇ ನಡೆಯುತ್ತಿಲ್ಲ. ನಡೆಯುವುದಕ್ಕೂ ಸಾಧ್ಯವಿರಲಿಲ್ಲ. ಈ ಒಂದು ಕೊರತೆ ಇತ್ತು. ಈಒಂದು ಪರಿಸ್ಥಿತಿಯನ್ನು ಮನಗೊಂಡು ನಮ್ಮ ಸರ್ಕಾರ ಇಡೀರಾಜ್ಯದಲ್ಲಿ ಇದ್ದಂಥ ಡಿ.ಎಲ್.ಆರ್.ಸಿ.